**ಮುಖ್ಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಯಾದಗಿರಿ**
**ಸಿ.ಸಿ. ನಂ. 574 / 2016**

ದಿನಾಂಕಃ **04.04.2026**

ಸಾಕ್ಷಿಗೆ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು

| | | |
|---|---|---|
| ಸಾಕ್ಷಿಯ ಹೆಸರುಃ | - | ಮಹಮ್ಮದ್ ಗೌಸ್ |
| ತಂದೆ ಹೆಸರುಃ | - | ಅಬ್ದುಲ್ ಹಮೀದ್ |
| ವಯಸ್ಸುಃ | - | **51** ವರ್ಷ |
| ಉದ್ಯೋಗಃ | - | ಸಹಾಯಕ ಆರಕ್ಷಕ ಉಪನೀರಿಕ್ಷಕರು, ಯಾದಗಿರಿ ನಗರ ಠಾಣೆ |
| ವಾಸಸ್ಥಳಃ | - | ಯಾದಗಿರಿ |

ಮುಖ್ಯ ವಿಚಾರಣೆಃ ಸ.ಸ.ಅ. ರವರಿಂದಃ

ದಿನಾಂಕ **19.12.2022** ರಿಂದ ಇಲ್ಲಿಯವರೆಗೆ ಯಾದಗಿರಿ ನಗರ ಪೋಲೀಸ್ ಠಾಣೆ ಯಲ್ಲಿ ಸಹಾಯಕ ಆರಕ್ಷಕ ಉಪನೀರಿಕ್ಷಕನಾಗಿ ಕರ್ತವ್ಯ ನಿರ್ವಹಿಸುತ್ತಿದೇನೆ.

ದಿನಾಂಕ **06.05.2025** ರಂದು ಮಾನ್ಯ ನ್ಯಾಯಾಲಯದಿಂದ ಉದ್ಘೋಷಣೆಯ ವಾರೆಂಟನ್ನು ಪಡೆದುಕೊಂಡಿದ್ದೆ.

ದಿನಾಂಕ **06.06.2025** ರಂದು ಸದರಿ ಉದ್ಘೋಷಣೆಯ ವಾರೆಂಟನ್ನು ಜಾರಿಮಾಡಿರುತೇನೆ.

ಬೆಂಗಳೂರಿನ ಜಗಜೀವನರಾವ್ ನಗರದ ಪಾದರಾಯನಪುರದಲ್ಲಿ ಇಬ್ಬರು ಪಂಚರನ್ನು ಬರ ಮಾಡಿಕೊಂಡು ಆಪಾದಿತನ ವಿಳಾಸಕ್ಕೆ ಹೋಗಿ ಉದ್ಘೋಷಣೆಯ ವಾರೆಂಟನ್ನು ಆತನ ಮನೆಗೆ ಅಂಟಿಸಿರುತೇನೆ. ಅದೇ ರೀತಿ ಸಾರ್ವಜನಿಕ ಸ್ಥಳದಲ್ಲಿ, ಮಾರುಕಟ್ಟೆಯಲ್ಲಿ ಮತ್ತು ಬಸ್ ನಿಲ್ದಾಣದಲ್ಲಿ ಉದ್ಘೋಷಣೆಯ ವಾರೆಂಟನ್ನು ಅಂಟಿಸಿರುತೇನೆ. ಅದೇ ರೀತಿ ಆರೋಪಿತನ ಬಗ್ಗೆ ಸಾರ್ವಜನಿಕರಲ್ಲಿ ವಿಚಾರಿಸಿದಾಗ ಅವರು ಸದರಿ ವ್ಯಕ್ತಿಯು ಇರುವುದಿಲ್ಲ ಎಂದು ಹೇಳಿದ್ದರು. ಒಂದು ವೇಳೆ ಆರೋಪಿತನ ಬಗ್ಗೆ ಮಾಹಿತಿ ಕಂಡು ಬಂದರೆ ಯಾದಗಿರಿ ನಗರ ಪೋಲೀಸ ಠಾಣೆಗೆ ಮಾಹಿತಿಯನ್ನು ತಿಳಿಸಬೇಕು ಎಂದು ಸಾರ್ವಜನಿಕರಲ್ಲಿ ನಾನು ವಿನಂತಿಸಿಕೊಂಡಿದ್ದೆ. ನಂತರ ಬೆಂಗಳೂರಿನಿಂದ ಮರಳಿ ಬಂದು ವರದಿಯನ್ನು ಈ ಪ್ರಕರಣದಲ್ಲಿ ಹಾಜರುಪಡಿಸಿರುತೇನೆ. ಸಾಕ್ಷಿಯು

ಉದ್ಘೋಷಣೆಯ ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-3 ಎಂದು ಗುರುತಿಸಲಾಯಿತು ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿಪಿ-3 ಎ ಎಂದು ಗುರುತಿಸಲಾಯಿತು. ಜಿಪಿಎಸ್ ಫೋಟೋದ ನೆರಳಚ್ಚು ಪ್ರತಿಯನ್ನು ಹಾಜರುಪಡಿಸಿರುತ್ತಾರೆ.

<u>ಮರು ವಿಚಾರಣೆಃ ಇಲ್ಲಃ</u>

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚುಗಾರನಿಂದ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಅದೆ.

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,
ಯಾದಗಿರಿ.